ಮೆಲಿಸ್ಸಾ ನಂಗರೆ ಎಂಬ ಹೆಸರಿನಲ್ಲಿ ಬರೆಯುವ ಮೆಲಿಸಾ ಬೆರೆನಿಸ್ ನಂಗರೆ ಬ್ಲಾಂಕೊ 1998ರ ಸೆಪ್ಟಂಬರ್ 29ರಂದು ವ್ಯಾಡಲಹಾರಾ, ಹಲಿಸ್ಕೊ (ಮೆಕ್ಸಿಕೊ) ನಲ್ಲಿ ಜನಿಸಿದರು. 2010 ರಿಂದ ಮೆಕ್ಸಿಕೊ ರಾಜ್ಯದಲ್ಲಿ ವಾಸಿಸುತ್ತಿರುವ ಮೆಲಿಸ್ಸಾ, ಸ್ಪ್ಯಾನಿಷ್ ಬರಹಗಾರ್ತಿ, ಸಾಂಸ್ಕೃತಿಕ ವಕ್ತಾರೆ ಹಾಗೂ ಕೊಲಾಜ್ ಕಲಾವಿದೆ. ಮೆಕ್ಸಿಕೊ ರಾಜ್ಯದ ಸ್ವಾಯತ್ತ ವಿಶ್ವವಿದ್ಯಾಲಯದಿಂದ ಸ್ಪ್ಯಾನಿಷ್ ಭಾಷೆ ಮತ್ತು ಸಾಹಿತ್ಯದಲ್ಲಿ ಸ್ನಾತಕ ಪದವಿಯನ್ನು ಪಡೆದಿರುತ್ತಾರೆ. ಪ್ರಸ್ತುತ ಎನ್ ಲಾ ಮಾಸ್ಮೆಡುಲಾ ಎಂಬ ಡಿಜಿಟಲ್ ಮ್ಯಾಗಜಿನ್ (www.enlamasmedula.com) ಅನ್ನು ನಡೆಸುತ್ತಿರುವ ಮೆಲಿಸ್ಸಾ, ವಿವಿಧ ಆನ್‌ಲೈನ್ ಪತ್ರಿಕೆಗಳೊಂದಿಗೆ ಪ್ರಕಟಣಾ ಸಹಭಾಗಿತ್ವ ಹೊಂದಿದ್ದಾರೆ.
'Raíz del cielo' (2005), 'Alba-vigía' (2008), 'Sentencia del fuego' (2011), 'Travesía: Entidad del curpo' (2014), 'El cuerpo descansa en algún lugar' (2022), ಹಾಗೂ 'El cielo cae a voces' (2023) ಎಂಬ ಹೆಸರಿನ ಕವನ ಸಂಕಲನಗಳನ್ನು ಪ್ರಕಟಿಸಿದ್ದಾರೆ.

## ಮೆಲಿಸ್ಸಾ ನಂಗರೆ ಸಂದರ್ಶನ

**◆ ನಿಮ್ಮ ಜನ್ಮಸ್ಥಳ ಐತಿಹಾಸಿಕ ನಗರ ವ್ಯಾಡಲಹಾರ ಶಹರದ ಬಗ್ಗೆ ತಿಳಿಸಿ...**

ನನ್ನ ಹುಟ್ಟೂರು ಚಾರಿತ್ರಿಕವಾಗಿ ಪ್ರಸಿದ್ಧಿ ಪಡೆದ ವ್ಯಾಡಲಹಾರ ನಗರ. ಅದು ವೈರುಧ್ಯಗಳ ಮತ್ತು ಬದುಕಿನ ತೀವ್ರ ಅನುಭವಗಳ ಕುದಿ ಪಾತ್ರೆ. ಒಂದೊಮ್ಮೆ ಅದರ ಬೀದಿಗಳನ್ನು ರಕ್ತದ ಕಲೆಗಳಿಂದ ಮಲಿನಗೊಳಿಸಿದ್ದ ಗ್ಯಾಂಗ್‌ವಾರ್‌ಗಳಾಚೆಗೂ ವ್ಯಾಡಲಹಾರ (Guadalajara) ವೈವಿಧ್ಯತೆಗಳಿಂದ ತುಂಬಿ ತುಳುಕುವ ಮುಕ್ತ ಜೀವನ ಕೇಂದ್ರ. ಅಲ್ಲಿ ಯಾವ ಕೀಳರಿಮೆಗಳಿಲ್ಲದೇ LGBTQ ಸಮುದಾಯ ಹೆಮ್ಮೆಯಿಂದ ತುಂಬು ಬಾಳು ನಡೆಸುತ್ತದೆ. ಅದರ ಚೌಕಗಳಲ್ಲಿ ಮೆಕ್ಸಿಕನ್ ಸಂಗೀತ 'ಮರಿಯಾಚಿ'ಯ ಸುಮಧುರ ರಾಗವು ಮಾರ್ದನಿಸುತ್ತಿರುತ್ತದೆ ಮತ್ತೆ ಈ ನಗರದ ಒಳ ಬಾಳಿನ ಸುಂದರ ಹೆಣಿಗೆಗಳಲ್ಲಿ, ಮೆಕ್ಸಿಕೋದ ಪುರಾತನ ಮೂಲ ನಿವಾಸಿಗಳಾದ ಹ್ಯುಚಿಯೊಸ್ ಮತ್ತು ನಹುವಾ ಜನ ಸಮುದಾಯವು ಕಾಣಸಿಗುತ್ತದೆ. ಭೂತ ಮತ್ತು ವರ್ತಮಾನ ಪರಸ್ಪರ ಮನಮೋಹಕವಾಗಿ ಹೆಣೆದ, ಶ್ರೀಮಂತ ಚರಿತ್ರೆ ಮತ್ತು ಸಂಸ್ಕೃತಿಯ ಕಥನಗಳನ್ನು ಈ ನಗರವು ನೇಯುತ್ತದೆ.

**◆ 'ಟಕಿಲಾ' ಪ್ರತಿಯೊಬ್ಬ ಮೆಕ್ಸಿಕನ್ ನಾಗರಿಕನ ದಿನಚರಿಯ ಅವಿಭಾಜ್ಯ ಅಂಗವೆಂಬಂತಿದೆ. ಒಬ್ಬ ಕವಿಯಾಗಿ ಆ ಸ್ಫೂರ್ತಿದಾಯಕ ಪೇಯವನ್ನು ನೀವು ಯಾವ ರೀತಿ ನೋಡುತ್ತೀರಿ?**

ಒಬ್ಬ ಕವಿಯಾಗಿ ಟಕಿಲಾವನ್ನು ನಾನು ಮೆಕ್ಸಿಕನ್ ಐಡೆಂಟಿಟಿಯ ದ್ರವ ರೂಪಕವಾಗಿ ಗ್ರಹಿಸುತ್ತೇನೆ. ಪರಂಪರೆಗಳಲ್ಲಿ ಬೇರೂರಿರುವ ದೇಶವೊಂದರ ಉತ್ಸಾಹ ಮತ್ತು ಅದಮ್ಯ ಶಕ್ತಿಯನ್ನು ಟಕಿಲಾದ ಅಮಲೇರಿಸುವ ಪರಿಮಳ ಮತ್ತು ಗಾಢ ರುಚಿ ಬಡಿದೆಬ್ಬಿಸುತ್ತದೆ.